Teachingninja.in

Latest Govt Job updates

Private Job updates

Free Mock tests available

Visit - teachingninja.in

# Karnataka TET

## Previous Year Paper

## 2015

Teachingninja.in

testbook
GET IT ON Google Play

**TET -15-01-2017 Paper - I Environmental Science 1-5th Standard**


1. ಈ ಕೆಳಗಿನ ಯಾವ ಲಕ್ಷಣಗಳು 'ಸಾಸಿವೆ ಸಸ್ಯ'ದಲ್ಲಿ ಕಂಡುಬರುತ್ತದೆ?
(ಎ) ತಾಯಿ ಬೇರು, ಜಾಲಬಂಧ ವಿನ್ಯಾಸ, ತ್ರಿದಳ ಪುಷ್ಪ
(ಬಿ) ತಾಯಿಬೇರು, ಜಾಲಬಂಧ ವಿನ್ಯಾಸ, ಪಂಚದಳ ಪುಷ್ಪ
(ಸಿ) ತಂತು ಬೇರು, ಜಾಲಬಂಧ ವಿನ್ಯಾಸ, ತ್ರಿದಳ ಪುಷ್ಪ
(ಡಿ) ತಾಯಿಬೇರು, ಸಮ ವಿನ್ಯಾಸ, ಪಂಚದಳ ಪುಷ್ಪ

2. ಅಜೋಲ್ಲಾಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿ.
(ಎ) ಅಪುಷ್ಪಿಸಸ್ಯ, ಕೀಟಹಾರಿ, ನೆಲವಾಸಿ
(ಬಿ) ಶೈವಲ, ಜೈವಿಕ ಗೊಬ್ಬರ, ಜಲವಾಸಿ
(ಸಿ) ಅಪುಷ್ಪಿ ಸಸ್ಯ, ಜೈವಿಕ ಗೊಬ್ಬರ, ಜಲವಾಸಿ
(ಡಿ) ಹಾವಸೆ ಸಸ್ಯ, ಜೈವಿಕ ಗೊಬ್ಬರ, ತೇವಾಂಶಭರಿತ ಮಣ್ಣು

3. ಈ ಕೆಳಗಿನ ಯಾವ ಜೀವಿಗಳು ಸಾಗರದಲ್ಲಿ ಉತ್ಪಾದಕಗಳಾಗಿವೆ?
(ಎ) ಸಸ್ಯ ಪ್ಲವಕಗಳು (Phytoplanktons)
(ಬಿ) ನೆಕ್ಟಾನ್‌ಗಳು (Nectons)
(ಸಿ) ಜಲತಳ ಜೀವಿಗಳು (Benthos)
(ಡಿ) ಪ್ರಾಣಿ ಪ್ಲವಕಗಳು (Zooplanktons)

4. ಈ ಕೆಳಗಿನ ಯಾವ ಪ್ರಕ್ರಿಯೆಯು ಸಸ್ಯಗಳಲ್ಲಿ ನಡೆಯುತ್ತದೆ?
(ಎ) ಆವೀಕರಣ ಪ್ರಕ್ರಿಯೆ
(ಬಿ) ಬಾಷ್ಪೀಕರಣ ಕ್ರಿಯೆ
(ಸಿ) ಉತ್ಪನನ ಕ್ರಿಯೆ
(ಡಿ) ಸಾಂದ್ರೀಕರಣ ಕ್ರಿಯೆ

5. ಕೊಟ್ಟಿರುವ ವೆನ್ ಚಿತ್ರದಲ್ಲಿ "X" ಸ್ಥಳದಲ್ಲಿ ಕಂಡುಬರುವ ಪ್ರಾಣಿಯನ್ನು ಹೆಸರಿಸಿ.




(ಎ) ಕಾಟ್ಲಾ
(ಬಿ) ಲೋಳೆ ಮೀನು
(ಸಿ) ಎಕಿಡ್ನಾ
(ಡಿ) ಹಾವು

6. ಈ ಕೆಳಗಿನವುಗಳಲ್ಲಿ ಸರಿಯಾದ ಹೊಂದಾಣಿಕೆ ಯಾವುದು?
(ಎ) ಜೀವಸತ್ವ ಎ – ಹೃದಯ ಮತ್ತು ಜೀರ್ಣನಾಳದ ರಕ್ಷಣೆ
(ಬಿ) ಜೀವಸತ್ವ ಬಿ – ಹಲ್ಲು ಮತ್ತು ವಸಡುಗಳ ರಕ್ಷಣೆ
(ಸಿ) ಜೀವಸತ್ವ ಸಿ – ಕಣ್ಣಿನ ದೃಷ್ಟಿ ಮತ್ತು ಚರ್ಮದ ರಕ್ಷಣೆ
(ಡಿ) ಜೀವಸತ್ವ ಡಿ – ಮೂಳೆ ಮತ್ತು ಹಲ್ಲಿನ ರಕ್ಷಣೆ

7. ಕಾಲಂ – ಎ ನಲ್ಲಿ ಕೊಟ್ಟಿರುವ ಪ್ರದೇಶಗಳನ್ನು ಕಾಲಂ–ಬಿ ನಲ್ಲಿ ಕೊಟ್ಟಿರುವ ಮನೆಗಳೊಂದಿಗೆ ಹೊಂದಿಸಿ.

| ಕಾಲಂ – ಎ | ಕಾಲಂ – ಬಿ |
|---|---|
| (1) ಧ್ರುವ ಪ್ರದೇಶಗಳು | (ಪಿ) ಬಿಡಾರಗಳು |
| (2) ಮರುಭೂಮಿ | (ಕ್ಯೂ) ಇಗ್ಲೂಗಳು |
| (3) ಪ್ರವಾಹ ಪೀಡಿತ ಪ್ರದೇಶಗಳು | (ಆರ್) ಮರದಿಂದ ಮಾಡಿದ ಮನೆಗಳು |
| (4) ಭೂಕಂಪನ ಪ್ರದೇಶಗಳು | (ಎಸ್) ಮರದ ಕಾಲುಗಳ ಮನೆಗಳು |

| | 1 | 2 | 3 | 4 |
|---|---|---|---|---|
| (ಎ) | ಕ್ಯೂ | ಪಿ | ಎಸ್ | ಆರ್ |
| (ಬಿ) | ಕ್ಯೂ | ಪಿ | ಆರ್ | ಎಸ್ |
| (ಸಿ) | ಕ್ಯೂ | ಎಸ್ | ಪಿ | ಆರ್ |
| (ಡಿ) | ಕ್ಯೂ | ಎಸ್ | ಆರ್ | ಪಿ |

8. ಕೊಟ್ಟಿರುವ ಚಿತ್ರದಲ್ಲಿ ಗ್ರಂಥಿ 'ಬಿ' ಯು ಈ ಕೆಳಗಿನ ಹಾರ್ಮೋನುಗಳಲ್ಲಿ ಒಂದನ್ನು ಸ್ರವಿಸುತ್ತದೆ.




(ಎ) ಇನ್ಸುಲಿನ್
(ಬಿ) ಗ್ಲುಕಾಗಾನ್
(ಸಿ) ಅಡ್ರಿನಾಲಿನ್
(ಡಿ) ಪ್ರೊಜೆಸ್ಟಿರಾನ್

9. ಭಾರತದಲ್ಲಿ ಪ್ರಮುಖವಾದ ಸಾರ್ವಜನಿಕ ಸಾರಿಗೆ ಎಂದರೆ
(ಎ) ವಿಮಾನ
(ಬಿ) ರೈಲು
(ಸಿ) ಹಡಗು
(ಡಿ) ಬಸ್

10. ನಮ್ಮ ರಾಷ್ಟ್ರ ಲಾಂಛನದಲ್ಲಿ ನಾಲ್ಕು ಸಿಂಹಗಳು ಪರಸ್ಪರ ವಿರುದ್ಧ ಮುಖಮಾಡಿ ನಿಂತಿವೆ, ಈ ಲಾಂಛನದ ಕೆಳಭಾಗದಲ್ಲಿ ಮೂರು ಸಂಕೇತಗಳು ಒಂದೇ ಸಾಲಿನಲ್ಲಿ ಕಂಡುಬರುತ್ತವೆ. ಅವುಗಳೆಂದರೆ
(ಎ) ಆನೆ, ಚಕ್ರ ಮತ್ತು ಗೂಳಿ
(ಬಿ) ನವಿಲು, ಚಕ್ರ ಮತ್ತು ಕಮಲದ ಹೂ
(ಸಿ) ಕುದುರೆ, ಚಕ್ರ ಮತ್ತು ಗೂಳಿ
(ಡಿ) ಕುದುರೆ, ಚಕ್ರ ಮತ್ತು ಆನೆ

11. ಸಮುದ್ರದಲ್ಲಿ ಉಬ್ಬರ ಮತ್ತು ಇಳಿತಗಳು ಉಂಟಾಗಲು ಕಾರಣ
(ಎ) ಗುರುತ್ವಾಕರ್ಷಣ ಬಲ
(ಬಿ) ಭೂಮಿಯ ಭ್ರಮಣೆ
(ಸಿ) ಚಂದ್ರನ ಭ್ರಮಣೆ
(ಡಿ) ಗ್ರಹಗಳ ಚಲನೆ

Teachingninja.in

12. ಆಗಿದ್ದಾಂಗೆ ಪ್ರವಾಹ ಉಂಟಾಗುವ ಪ್ರದೇಶಗಳಲ್ಲಿ ವಾಸಿಸುವ ಜನರು ತಮ್ಮನ್ನು ಪ್ರವಾಹದಿಂದ ರಕ್ಷಿಸಿಕೊಳ್ಳಲು, ಈ ಕೆಳಗಿನ ಒಂದನ್ನು ನಿರ್ಮಿಸಿಕೊಳ್ಳುವರು.
(ಎ) ಮರಗಳ ಮೇಲೆ ಮನೆಗಳು
(ಬಿ) ಬಿದಿರು & ಮರದಿಂದ ಮಾಡಿದ ಮನೆಗಳು
(ಸಿ) ಮರಗಾಲುಗಳಿಂದ ಮಾಡಿದ ಮನೆಗಳು
(ಡಿ) ದೋಣಿ ಮನೆಗಳು
13. ಈ ಕೆಳಗಿನವುಗಳಲ್ಲಿ ಯಾವುದು ಹಸಿರು ಮನೆ ಅನಿಲವಲ್ಲ?
(ಎ) ನೈಟ್ರೋಜನ್ (ಬಿ) ಮೀಥೇನ್
(ಸಿ) ನೈಟ್ರೋಜನ್ ಡೈ ಆಕ್ಸೈಡ್ (ಡಿ) ಸಿ.ಎಫ್.ಸಿಗಳು
14. ಈ ಕೆಳಗಿನ ಒಂದು ಗುಂಪಿನ ದೇಶಗಳಲ್ಲಿ ಕರ್ಕಾಟಕ ಸಂಕ್ರಾಂತಿ ವೃತ್ತವು ಹಾದು ಹೋಗುತ್ತದೆ?
(ಎ) ಭಾರತ & ಇರಾನ್
(ಬಿ) ಭಾರತ & ಪಾಕಿಸ್ತಾನ
(ಸಿ) ಭಾರತ & ಸೌದಿ ಅರೇಬಿಯಾ
(ಡಿ) ಭಾರತ & ಇರಾಕ್
15. ಬಿಟಿ–ಬದನೆ, ಬಿಟಿ–ಹತ್ತಿ ಮತ್ತು ಬಿಟಿ–ಅಕ್ಕಿ, ಇವುಗಳಲ್ಲಿ ಬಿಟಿ–ಯ ವಿಸ್ತೃತ ರೂಪ
(ಎ) ಬಯೋಟೆಕ್ನಾಲಾಜಿಕಲ್
(ಬಿ) ಭಾರತ್ ಟ್ರೇಡ್
(ಸಿ) ಬ್ರಿಟಿಷ್ ಟ್ರೇಡ್
(ಡಿ) ಬೆಸಿಲಸ್ ಥುರೆಂಜಿಎನ್ಸಿಸ್
16. ಈ ಕೆಳಗಿನವುಗಳಲ್ಲಿ ಒಂದು ವಿಭಕ್ತ ಕುಟುಂಬವನ್ನು ತಿಳಿಸುತ್ತದೆ.
(ಎ) 1950ರ ನಂತರ ಕಂಡುಬಂದ ಕುಟುಂಬ
(ಬಿ) ಪೋಷಕರು ಮತ್ತು ಅವರ ಮಕ್ಕಳನ್ನು ಮಾತ್ರ ಒಳಗೊಂಡ ಕುಟುಂಬ
(ಸಿ) ಪೋಷಕರು, ಮಕ್ಕಳು ಮತ್ತು ಅಜ್ಜಿ–ತಾತಂದಿರನ್ನು ಒಳಗೊಂಡ ಕುಟುಂಬ
(ಡಿ) ಗಂಡ ಮತ್ತು ಹೆಂಡತಿಯನ್ನು ಮಾತ್ರ ಒಳಗೊಂಡ ಕುಟುಂಬ
17. ಈ ಕೆಳಗಿನ ಯಾವುದು ವಿಧುರರಿಗೆ ತಮ್ಮ ಸಂಗಾತಿಯ ಮರಣಾನಂತರ ಅತ್ಯಂತ ತೀವ್ರತರ ಸಮಸ್ಯೆ ಎಂದು ಕಂಡುಬಂದಿದೆ?
(ಎ) ಒಂಟಿತನ
(ಬಿ) ಸಂಗಾತಿಯ ಮರಣ ನಷ್ಟ ಸ್ವೀಕಾರ
(ಸಿ) ಒಂಟಿಯಾಗಿ ಸ್ಥಳಗಳಿಗೆ ಹೋಗುವುದು/ಕೆಲಸ ಮಾಡುವುದು
(ಡಿ) ಮನೆಯ ಕೆಲಸಗಳು
18. ಮಕ್ಕಳ ಮೇಲೆ ಪ್ರಭಾವ ಬೀರುವ ಪ್ರಮುಖ ಸಾಮಾಜೀಕರಣ ಅಂಶ ಯಾವುದು?
(ಎ) ಮಾಧ್ಯಮ
(ಬಿ) ಸಮಾನ ವಯಸ್ಕರ ಗುಂಪು
(ಸಿ) ಕುಟುಂಬ
(ಡಿ) ಪವಿತ್ರ ಸ್ಥಳಗಳು
19. ಈ ಕೆಳಗಿನ ಯಾವ ಒಂದು ವಿಧಾನವು ಪರಿಸರ ಅಧ್ಯಯನದ ವಿಧಾನವಲ್ಲ?
(ಎ) ವೀಕ್ಷಣೆ
(ಬಿ) ಊಹೆ/ಕಲ್ಪನೆ
(ಸಿ) ಸಾಂಪ್ರದಾಯಿಕ ಜ್ಞಾನ
(ಡಿ) ಸಂಪನ್ಮೂಲ ವ್ಯಕ್ತಿಗಳ ಜೊತೆ ಸಂವಾದ
20. ಪರಿಸರ ಅಧ್ಯಯನ ತರಗತಿಯಲ್ಲಿ 'ಮಣ್ಣು' ವಿಷಯವನ್ನು ಬೋಧಿಸುವಾಗ, ಮಣ್ಣಿನ ವಿಧಗಳು ಮತ್ತು ಮಣ್ಣಿನ ಸಂರಕ್ಷಣೆ ಬಗ್ಗೆ ಶಿಕ್ಷಕರು ಪಾತ್ರಾಭಿನಯದ ಚಟುವಟಿಕೆ ಏರ್ಪಡಿಸುತ್ತಾರೆ. ಈ ಚಟುವಟಿಕೆಯ ಪ್ರಮುಖ ಉದ್ದೇಶವೆಂದರೆ
(ಎ) ಕಲಿಕಾ ಪ್ರಕ್ರಿಯೆಯಲ್ಲಿ ಏಕತಾನತೆಯನ್ನು ಹೋಗಲಾಡಿಸುವುದು
(ಬಿ) ಮಣ್ಣಿನ ವಿಧಗಳು ಮತ್ತು ಮಣ್ಣಿನ ಸಂರಕ್ಷಣೆಯ ಬಗ್ಗೆ ಕಲಿಕಾರ್ಥಿಯ ಜ್ಞಾನವನ್ನು ಹೆಚ್ಚಿಸುವುದು
(ಸಿ) ಕಲಿಕಾರ್ಥಿಯ ಸಾಮಾಜಿಕ ಕೌಶಲಗಳನ್ನು ಅಭಿವೃದ್ಧಿಗೊಳಿಸುವುದು
(ಡಿ) ಕಲಿಕಾ ಪ್ರಕ್ರಿಯೆಯಲ್ಲಿ ಕಲಿಕಾರ್ಥಿಯ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಖಾತರಿಪಡಿಸುವುದು
21. ಐದನೇ ತರಗತಿಯ ಪರಿಸರ ಅಧ್ಯಯನದ ಆಶ್ರಯ ಮತ್ತು ಉಡುಪು ಎಂಬ ಘಟಕದ "ಆಲೋಚಿಸಿ" ಭಾಗದಲ್ಲಿ ಈ ಕೆಳಗಿನ ಹೇಳಿಕೆ ಕೊಡಲಾಗಿದೆ.
"ಬೇಸಿಗೆ ಕಾಲದಲ್ಲಿ ಹತ್ತಿ ಬಟ್ಟೆಗಳನ್ನು ಧರಿಸುವುದು ಸೂಕ್ತ" ಈ ಹೇಳಿಕೆಯ ಪ್ರಮುಖ ಉದ್ದೇಶ
(ಎ) ವಿದ್ಯಾರ್ಥಿಗಳು ಮುಂದಿನ ಹಂತದ ಅಧ್ಯಯನಕ್ಕಾಗಿ ತರಬೇತುಗೊಳಸುವುದು
(ಬಿ) ಪ್ರತಿಯೊಬ್ಬ ವಿದ್ಯಾರ್ಥಿಯು ಬೇಸಿಗೆಯಲ್ಲಿ ಹತ್ತಿಬಟ್ಟೆಗಳನ್ನು ಧರಿಸುವಂತೆ ಪ್ರೋತ್ಸಾಹಿಸುವುದು
(ಸಿ) ನೈಜ ಜೀವನದ ಅಗತ್ಯತೆಗಳನ್ನು ಅರ್ಥೈಸಿಕೊಳ್ಳುವ ಕೌಶಲ ಮತ್ತು ಕಲ್ಪನಾಶಕ್ತಿಯನ್ನು ಉತ್ತೇಜಿಸುವುದು
(ಡಿ) ವಿವಿಧ ಋತುಗಳಲ್ಲಿ ಧರಿಸಬಹುದಾದ ಉಡುಪುಗಳ ಬಗೆಗಿನ ಜ್ಞಾನವನ್ನು ವಿದ್ಯಾರ್ಥಿಗಳಲ್ಲಿ ಅಳೆಯುವುದು
22. ನಿರಂತರ ಮೌಲ್ಯಮಾಪನದಲ್ಲಿ ಈ ಕೆಳಗಿನ ಯಾವ ಅಂಶಗಳನ್ನು ಪರಿಗಣಿಸಲಾಗುತ್ತದೆ?
(ಎ) ಮಗುವಿನ ಬೆಳವಣಿಗೆ ಮತ್ತು ಅಭಿವೃದ್ಧಿ
(ಬಿ) ಮಗುವಿನ ಎಲ್ಲಾ ವರ್ತನೆಗಳ ಅವಲೋಕನ
(ಸಿ) ಮಗುವಿನ ಪಠ್ಯ ಸಂಯೋಜಿತ ಮೌಲ್ಯಮಾಪನ
(ಡಿ) ಮಗುವಿನ ಸಹಪಠ್ಯ ಸಂಯೋಜಿತ ಮೌಲ್ಯಮಾಪನ
23. ಈ ಕೆಳಗಿನ ಯಾವುದು ರೂಪಣಾತ್ಮಕ ಮೌಲ್ಯಮಾಪನ ವಿಧಾನವಲ್ಲ?
(ಎ) ಇದು ನೈದಾನಿಕ ಪರೀಕ್ಷೆ ಮತ್ತು ಪರಿಹಾರ ಬೋಧನೆಗಳನ್ನು ಒಳಗೊಂಡಿದೆ
(ಬಿ) ಇದು ರಸಪ್ರಶ್ನೆ ಮತ್ತು ಗೃಹ ಕಾರ್ಯಗಳನ್ನೊಳಗೊಂಡಿದೆ
(ಸಿ) ಇದು ಸೆಮಿಸ್ಟರ್‌ನ ಕೊನೆಯಲ್ಲಿ ಅಥವಾ ವರ್ಷದ ಕೊನೆಯಲ್ಲಿ ನಡೆಸುವ ಪರೀಕ್ಷೆಯನ್ನೊಳಗೊಂಡಿದೆ
(ಡಿ) ಇದು ಯೋಜನೆ & ನಿಯೋಜಿತ ಕಾರ್ಯಗಳನ್ನೊಳಗೊಂಡಿದೆ
24. ಪ್ರಾಥಾಮಿಕ ಹಂತದಲ್ಲಿ ಪರಿಸರ ಅಧ್ಯಯನವು ಈ ಕೆಳಗಿನ ಯಾವ ಅಂಶವನ್ನು ಒಳಗೊಂಡಿರಬೇಕು?
(ಎ) ಅಭ್ಯಾಸಕ್ಕಾಗಿ ಹೆಚ್ಚಿನ ಪ್ರಶ್ನೆಗಳನ್ನು ಒಳಗೊಂಡಿರುವುದು
(ಬಿ) ನಿರ್ದಿಷ್ಟ ಪದಗಳಿಗೆ ಸರಿಯಾದ ವ್ಯಾಖ್ಯಾನ ನೀಡಲು ಹೆಚ್ಚಿನ ಪ್ರಾಮುಖ್ಯತೆ ನೀಡುವುದು
(ಸಿ) ಸುತ್ತಮುತ್ತಲಿನ ಪರಿಸರವನ್ನು ಅನ್ವೇಷಿಸುವಂತಹ ಅವಕಾಶಗಳನ್ನು ಒದಗಿಸುವುದು
(ಡಿ) ಪರಿಕಲ್ಪನೆಗಳ ವಿವರಣೆಯ ಬಗ್ಗೆ ಹೆಚ್ಚು ಗಮನ ಹರಿಸುವುದು
25. ನಾಲ್ಕನೇ ತರಗತಿಯ ಪರಿಸರ ಅಧ್ಯಯನ ಪುಸ್ತಕದಲ್ಲಿ ವಿಜ್ಞಾನ ಮತ್ತು ಸಮಾಜ ವಿಜ್ಞಾನದ ಪರಿಕಲ್ಪನೆಗಳನ್ನು ಒಟ್ಟಾಗಿ ಕೊಡಲಾಗಿದೆ. ಇದರ ಪ್ರಮುಖ ಉದ್ದೇಶವೆಂದರೆ
(ಎ) ಪಠ್ಯವಿಷಯಗಳ ಸಂಖ್ಯೆಯನ್ನು ಕಡಿಮೆ ಮಾಡಲು
(ಬಿ) ಶಾಲಾ ಬ್ಯಾಗ್‌ನ ಹೊರೆ ಕಡಿಮೆ ಮಾಡಲು
(ಸಿ) ಶಿಕ್ಷಕರ ಸಂಖ್ಯೆಯನ್ನು ಕಡಿಮೆ ಮಾಡಲು
(ಡಿ) ವಿಷಯಗಳನ್ನು ಸಮಗ್ರವಾಗಿ ಅಧ್ಯಯನ ಮಾಡಲು

26. ಐದನೇ ತರಗತಿಯ ಪರಿಸರ ಅಧ್ಯಯನ ವಿಷಯದ ಪ್ರತಿ ಅಧ್ಯಾಯದಲ್ಲಿನ ಚಟುವಟಿಕೆ/ಪ್ರಯೋಗ/ಯೋಜನೆಗಳು ಕಲಿಕೆಯ ವೈಜ್ಞಾನಿಕ ಶಬ್ದಗಳು ಮತ್ತು ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳುವಲ್ಲಿ ಸಹಾಯ ಮಾಡುತ್ತವೆ. ಇದು ಕಲಿಕೆಯ ಈ ಕೆಳಗಿನ ತತ್ವದ ಮೇಲೆ ಆಧರಿಸಿದೆ.

(ಎ) ಕೇಳಿ–ಕಲಿ

(ಬಿ) ಮಾಡಿ–ಕಲಿ

(ಸಿ) ಓದಿ–ಕಲಿ

(ಡಿ) ನೋಡಿ–ಕಲಿ

27. ಪರಿಸರ ಅಧ್ಯಯನದ ವಿಷಯದ "ಸಸ್ಯಗಳಲ್ಲಿ ಬಾಷ್ಪೀಕರಣ" ಪರಿಕಲ್ಪನೆಯನ್ನು ಮೌಲ್ಯಮಾಪನ ಮಾಡಲು ಈ ಕೆಳಗಿನ ಯಾವ ತಂತ್ರವನ್ನು ಬಳಸಬಹುದಾಗಿದೆ?

(ಎ) ರಸಪ್ರಶ್ನೆ ಕೇಳುವುದು

(ಬಿ) ಗೃಹನಿಯೋಜಿತ ಕಾರ್ಯ

(ಸಿ) ನೇರಾನುಭವ (ಹಸ್ತದಿಂದ ಮಾಡುವ) ಚಟುವಟಿಕೆ

(ಡಿ) ಲಿಖಿತ ಪರೀಕ್ಷೆ

28. ಐದನೇ ತರಗತಿಯ ಪರಿಸರ ಅಧ್ಯಯನ ಪಠ್ಯದಲ್ಲಿ ಬಾಕ್ಸ್‌ಗಳನ್ನು ನೀಡಲಾಗಿರುವ ಪದ ಸಹಾಯ, ಇದನ್ನು ತಿಳಿಯಿರಿ ಮತ್ತು ಆಲೋಚಿಸಿ ಇಂತಹ ಅಂಶಗಳು ಕಲಿಕಾರ್ಥಿಯ ಈ ರೀತಿಯ ಕಲಿಕೆಗೆ ಪ್ರೋತ್ಸಾಹಿಸುತ್ತವೆ.

(ಎ) ಪರಿಕಲ್ಪನಾ ಕಲಿಕೆ ಮತ್ತು ಕಡ್ಡಾಯ ಕಲಿಕೆ

(ಬಿ) ಸಮೂಹ ಕಲಿಕೆ ಮತ್ತು ಅವಲಂಬಿತ ಕಲಿಕೆ

(ಸಿ) ಸ್ವ ಕಲಿಕೆ ಮತ್ತು ಸಹಭಾಗಿತ್ವ ಕಲಿಕೆ

(ಡಿ) ಪ್ರೋತ್ಸಾಹದಾಯಕ ಕಲಿಕೆ ಮತ್ತು ವೈವಿಧ್ಯಮಯ ಕಲಿಕೆ

29. ಈ ಕೆಳಗಿನವುಗಳಲ್ಲಿ ಯಾವುದು ಸಿ.ಸಿ.ಇ. ಯ ಉದ್ದೇಶವಲ್ಲ?

(ಎ) ವಾರ್ಷಿಕ ಪರೀಕ್ಷೆ ನಡೆಸಿ, ಮಗುವನ್ನು ಮುಂದಿನ ತರಗತಿಗೆ ತೇರ್ಗಡೆಗೊಳಿಸುವುದು

(ಬಿ) ಮಗುವಿನ ಕೊರತೆ ಹಾಗೂ ಸಾಧನೆಗಳನ್ನು ಗಮನಿಸಿ ಸೂಕ್ತ ಹಿಮ್ಮಾಹಿತಿ ನೀಡುವುದು

(ಸಿ) ಮಗುವನ್ನು ವಿವಿಧ ಆಯಾಮಗಳಲ್ಲಿ ಅರ್ಥೈಸಿಕೊಳ್ಳುವುದು

(ಡಿ) ಮಗುವಿನ ಸಮಗ್ರ ವ್ಯಕ್ತಿತ್ವವನ್ನು ರೂಪಿಸುವುದು

30. ಸೂಕ್ಷ್ಮ ಜೀವಿಗಳು ಎಲ್ಲೆಡೆ ಕಂಡುಬರುತ್ತವೆ ಎಂಬ ಪರಿಕಲ್ಪನೆಯನ್ನು ಬೋಧಿಸುವಾಗ ಶಿಕ್ಷಕರು ವಿದ್ಯಾರ್ಥಿಗಳಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳುತ್ತಾರೆ.

(ಎ) ಸೂಕ್ಷ್ಮ ಜೀವಿಗಳು ಮಣ್ಣಿನಲ್ಲಿ ಕಂಡುಬರುತ್ತವೆಯೇ?

(ಬಿ) ಸೂಕ್ಷ್ಮ ಜೀವಿಗಳು ನೀರಿನ ಒಳಗೂ ಕಂಡುಬರುತ್ತವೆಯೇ?

(ಸಿ) ಸೂಕ್ಷ್ಮ ಜೀವಿಗಳು ನಮ್ಮ ದೇಹದ ಒಳಗೂ ಕಂಡುಬರುತ್ತವೆಯೇ?

(ಡಿ) ಸೂಕ್ಷ್ಮ ಜೀವಿಗಳು ಗಾಳಿಯಲ್ಲೂ ಕಂಡುಬರುತ್ತವೆಯೇ?

ಈ ಕೆಳಗಿನ ಯಾವ ಕೌಶಲ್ಯಗಳನ್ನು ವಿದ್ಯಾರ್ಥಿಗಳಲ್ಲಿ/ಕಲಿಕಾರ್ಥಿಗಳಲ್ಲಿ ಅಭಿವೃದ್ಧಿಸಲು/ ಬೆಳೆಸಲು ಶಿಕ್ಷಕರು ಪ್ರಯತ್ನಿಸುತ್ತಿದ್ದಾರೆ?

(ಎ) ವೀಕ್ಷಣಾ ಕೌಶಲ್ಯ

(ಬಿ) ವರ್ಗೀಕರಣ ಕೌಶಲ್ಯ

(ಸಿ) ಆಲೋಚಿಸುವ ಕೌಶಲ್ಯ

(ಡಿ) ಉದ್ವೇಗ / ಭಾವುಕ ಕೌಶಲ್ಯ

## ಕೀ – ಉತ್ತರಗಳು

| | | | | | |
|---|---|---|---|---|---|
| 1 | ಬಿ | 11 | ಎ | 21 | ಸಿ |
| 2 | ಸಿ | 12 | ಸಿ | 22 | ಎ |
| 3 | ಎ | 13 | ಎ | 23 | ಸಿ |
| 4 | ಬಿ | 14 | ಸಿ | 24 | ಸಿ |
| 5 | ಡಿ | 15 | ಡಿ | 25 | ಡಿ |
| 6 | ಡಿ | 16 | ಬಿ | 26 | ಬಿ |
| 7 | ಎ | 17 | ಎ | 27 | ಸಿ |
| 8 | ಸಿ | 18 | ಸಿ | 28 | ಸಿ |
| 9 | ಬಿ | 19 | ಸಿ | 29 | ಎ |
| 10 | ಸಿ | 20 | ಡಿ | 30 | ಎ |

Teachingninja.in

1. ಪೋಷಕರು ಮತ್ತು ಅವರ ಮಕ್ಕಳು ಒಂದೇ ಮನೆಯಲ್ಲಿ ವಾಸಿಸುತ್ತಿದ್ದಾರೆ, ಆ ಕುಟುಂಬವನ್ನು ಹೀಗೆ ಕರೆಯಬಹುದು.
(ಎ) ನಗರ ಕುಟುಂಬ (ಬಿ) ವಿಭಕ್ತ ಕುಟುಂಬ
(ಸಿ) ಒಟ್ಟು ಕುಟುಂಬ (ಡಿ) ಅವಿಭಕ್ತ ಕುಟುಂಬ

2. ಜೀವನ ನಿರ್ವಹಣೆಗಾಗಿ ಒಬ್ಬ ವ್ಯಕ್ತಿಯ ನಿರ್ದಿಷ್ಟ ಕೌಶಲದೊಂದಿಗೆ ದೀರ್ಘ ಕಾಲದವರೆಗೆ ಮಾಡುವ ಕೆಲಸವೇ
(ಎ) ಹವ್ಯಾಸ (ಬಿ) ಕೆಲಸ
(ಸಿ) ಸ್ವಯಂ ಸೇವೆ (ಡಿ) ಉದ್ಯೋಗ

3. ವೈಯಕ್ತಿಕವಾಗಿ ಹಾಗೂ ಗುಂಪುಗಳೆರೆಡರಲ್ಲಿಯೂ ಆಡಬಹುದಾದ ಆಟವೇ
(ಎ) ವಾಲಿಬಾಲ್ (ಬಿ) ಶಟಲ್
(ಸಿ) ಚೆಸ್ (ಡಿ) ಕಬ್ಬಡ್ಡಿ

4. ಕೆಳಗಿನವುಗಳನ್ನು ಹೊಂದಿಸಿ ಮತ್ತು ಸರಿಯುತ್ತರವನ್ನು ಆಯ್ಕೆ ಮಾಡಿ.

| ಪಟ್ಟಿ – ಎ | ಪಟ್ಟಿ – ಬಿ |
|---|---|
| (ಎ) ಗಗನಚುಂಬಿ | (1) ಧ್ರುವೀಯ ಪ್ರದೇಶದಲ್ಲಿರುವ ಮನೆಗಳು |
| (ಬಿ) ಇಗ್ಲೂಗಳು | (2) ಗ್ರಾಮೀಣ ಪ್ರದೇಶದ ಮನೆಗಳು |
| (ಸಿ) ಕಚ್ಚಾಮನೆ | (3) ನಗರ ಪ್ರದೇಶದ ಮನೆಗಳು |
| (ಡಿ) ದೋಣಿ ಮನೆ | (4) ಸರೋವರ ಮೇಲೆ ನಿರ್ಮಿತ ಮನೆ |

| | ಎ | ಬಿ | ಸಿ | ಡಿ |
|---|---|---|---|---|
| ಎ | 2 | 3 | 4 | 1 |
| ಬಿ | 3 | 1 | 2 | 4 |
| ಸಿ | 1 | 3 | 2 | 4 |
| ಡಿ | 4 | 2 | 1 | 3 |

5. ದೇಹ ವರ್ಧಕಗಳು ಇವಾಗಿವೆ.
(ಎ) ಕಾರ್ಬೋಹೈಡ್ರೇಟ್‌ಗಳು (ಬಿ) ಲಿಪಿಡ್‌ಗಳು
(ಸಿ) ಪ್ರೋಟಿನ್‌ಗಳು (ಡಿ) ವಿಟಮಿನ್‌ಗಳು

6. ಕೆಳಗಿನವುಗಳನ್ನು ಹೊಂದಿಸಿ ಮತ್ತು ಸರಿಯುತ್ತರವನ್ನು ಆಯ್ಕೆ ಮಾಡಿ.

| ಪಟ್ಟಿ ಎ | ಪಟ್ಟಿ ಬಿ |
|---|---|
| (ಎ) ಕಾರ್ಬೋಹೈಡ್ರೇಟ್ಸ್ | (1) ಅಮಿನೋ ಆಮ್ಲಗಳು |
| (ಬಿ) ಪ್ರೋಟಿನ್‌ಗಳು | (2) ಕೊಬ್ಬು ಮತ್ತು ಎಣ್ಣೆ |
| (ಸಿ) ಲಿಪಿಡ್‌ಗಳು | (3) ಲ್ಯಾಕ್ಟೋಸ್ |
| (ಡಿ) ಡೈಸಾಕರೈಡ್ | (4) ಮೋನೋಸಾಕರೈಡ್‌ಗಳು |

| | ಎ | ಬಿ | ಸಿ | ಡಿ |
|---|---|---|---|---|
| ಎ | 4 | 2 | 1 | 3 |
| ಬಿ | 1 | 4 | 2 | 3 |
| ಸಿ | 1 | 4 | 3 | 2 |
| ಡಿ | 4 | 1 | 2 | 3 |

7. ದೇಹದಲ್ಲಿ ನೀರನ್ನು ಹಿಡಿದಿಡುವಲ್ಲಿ ಇದು ಸಹಾಯ ಮಾಡುತ್ತದೆ.
(ಎ) ಖನಿಜಗಳು (ಬಿ) ನಾರು ಪದಾರ್ಥ
(ಸಿ) ಪ್ರೋಟಿನ್ (ಡಿ) ವಿಟಮಿನ್

8. ವಿಟಮಿನ್ ಮತ್ತು ಖನಿಜಗಳು
(ಎ) ದೇಹ ನಿಯಂತ್ರಕಗಳು (ಬಿ) ಶಕ್ತಿ ಕೊಡುವ ಆಹಾರಗಳು
(ಸಿ) ದೇಹ ವರ್ಧಕಗಳು (ಡಿ) ಶಕ್ತಿ ಉತ್ಪಾದಕಗಳು

9. ಮಿಶ್ರಹಾರಿ ಗುಂಪಿಗೆ ಸೇರಿರುವ ಪ್ರಾಣಿ
(ಎ) ಜಿಂಕೆ (ಬಿ) ಬೆಕ್ಕು (ಸಿ) ಪಾರಿವಾಳ (ಡಿ) ಗಿಳಿ

10. ಕೆಳಗಿನವುಗಳನ್ನು ಹೊಂದಿಸಿ ಮತ್ತು ಸರಿಯುತ್ತರವನ್ನು ಆಯ್ಕೆ ಮಾಡಿ.

| ಪಟ್ಟಿ ಎ | ಪಟ್ಟಿ ಬಿ |
|---|---|
| (ಎ) ಆನೆ | (1) ಹುಲ್ಲುಗಾವಲು ಆವಾಸ |
| (ಬಿ) ಪ್ಯಾಂಗೋಲಿನ್ | (2) ಅಳಿವೆ ಆವಾಸ |
| (ಸಿ) ಮಿಡತೆ | (3) ಮರುಭೂಮಿ ಆವಾಸ |
| (ಡಿ) ಸ್ಪಂಜು ಪ್ರಾಣಿ | (4) ಅರಣ್ಯ ಆವಾಸ |

| | ಎ | ಬಿ | ಸಿ | ಡಿ |
|---|---|---|---|---|
| ಎ | 4 | 1 | 3 | 2 |
| ಬಿ | 4 | 2 | 1 | 3 |
| ಸಿ | 4 | 3 | 1 | 2 |
| ಡಿ | 1 | 2 | 3 | 4 |

11. ಉಭಯಚರ ಪ್ರಾಣಿಗೆ ಉದಾಹರಣೆ
(ಎ) ಬಾತುಕೋಳಿ (ಬಿ) ಕಪ್ಪೆ (ಸಿ) ಹೈಡ್ರಾ (ಡಿ) ಮೊಸಳೆ

12. ವಾಯುಮಂಡಲದಲ್ಲಿ ಕಂಡುಬರುವ ಈ ಅನಿಲಗಳು ಹಸಿರು ಮನೆ ಪರಿಣಾಮಕ್ಕೆ ಕಾರಣವಾಗಿವೆ.
(ಎ) ಸಾರಜನಕ, ಆಮ್ಲಜನಕ. ಇಂಗಾಲದ ಡೈ ಆಕ್ಸೈಡ್
(ಬಿ) ಮೀಥೇನ್, ಗಂಧಕದ ಡೈ ಆಕ್ಸೈಡ್, ಇಂಗಾಲದ ಡೈಆಕ್ಸೈಡ್
(ಸಿ) ಮೀಥೇನ್, ಇಂಗಾಲದ ಡೈ ಆಕ್ಸೈಡ್, ನೀರಾವಿ
(ಡಿ) ಆಮ್ಲಜನಕ, ನೈಟ್ರಸ್ ಆಕ್ಸೈಡ್, ನೀರಾವಿ

13. ಓಜೋನ್ ಮಂಡಲವು ಇರುವ ಎತ್ತರ
(ಎ) ಧ್ರುವಗಳ ಮೇಲೆ 8–10 ಕಿ.ಮೀ.
(ಬಿ) ಭೂ ಮಧ್ಯೆ ರೇಖೆ ಮೇಲೆ 8–10 ಕಿ.ಮೀ.
(ಸಿ) ಭೂ ಮೇಲ್ಮೈ ಮೇಲೆ 20–26 ಕಿ.ಮೀ.
(ಡಿ) ಭೂ ಮಧ್ಯೆ ರೇಖೆ ಮೇಲೆ 11–16 ಕಿ.ಮೀ.

14. ಪರಿಸರ ಮತ್ತು ಅರಣ್ಯಗಳು ಸಚಿವಾಲಯದ ಸಹಕಾರದಿಂದ ಪರಿಸರ ಶಿಕ್ಷಣ ಕೇಂದ್ರವು ಸ್ಥಾಪನೆಗೊಂಡಿರುವುದು
(ಎ) ಅಹಮದಾಬಾದ್ (ಬಿ) ಹೈದರಾಬಾದ್
(ಸಿ) ದಿಸ್ಪುರ (ಡಿ) ಭೂಪಾಲ್

15. ಕಲಿಕೆಗೆ ಸಂಬಂಧಿಸಿದಂತೆ ಈ ಹೇಳಿಕೆ ಸಮಂಜಸವಾದದ್ದು.
(ಎ) ಮಕ್ಕಳು ಮಾಡುವ ತಪ್ಪುಗಳಿಂದ ಅವರಲ್ಲಿ ಯಾವುದೇ ಕಲಿಕೆ ಆಗಿಲ್ಲವೆಂಬುದನ್ನು ಸೂಚಿಸುತ್ತದೆ.
(ಬಿ) ಸಕರಾತ್ಮಕವಾದ ಭಾವನೆಗಳೊಂದಿಗೆ ಸಮಾಧಾನಕರವಾದ ಪರಿಸರದಲ್ಲಿ ಉಂಟಾಗುವ ಕಲಿಕೆಯು ಪರಿಣಾಮಕಾರಿಯಾಗಿರುತ್ತದೆ.
(ಸಿ) ಭಾವನಾತ್ಮಕ ಅಂಶಗಳು ಯಾವುದೇ ಹಂತದಲ್ಲಿಯೂ ಕಲಿಕೆಯ ಮೇಲೆ ಪ್ರಭಾವ ಬೀರುವುದಿಲ್ಲ
(ಡಿ) ಕಲಿಕೆಯು ಮೂಲಭೂತವಾಗಿ ಒಂದು ಮಾನಸಿಕ ಚಟುವಟಿಕೆಯಲ್ಲ.

Teachingninja.in

16. ಕಪ್ಪೆ ಮತ್ತು ಕೀಟಗಳನ್ನು ಹಿಡಿದು ತಿನ್ನುವ ನೆಪೆಂಥಿಸ್ ಸಸ್ಯವು ಕಂಡುಬರುವುದು.
(ಎ) ಓಡಿಶಾ (ಬಿ) ಮೇಘಾಲಯ
(ಸಿ) ಅರುಣಾಚಲ ಪ್ರದೇಶ (ಡಿ) ಅಸ್ಸಾಂ

17. ಇದು ಪರಿಸರ ವಿಜ್ಞಾನದ ಅಧ್ಯಯನದ ಪ್ರಮುಖ ಉದ್ದೇಶವಲ್ಲ.
(ಎ) ಮುಖ್ಯ ಪರಿಕಲ್ಪನೆಗಳು, ಪದಗಳು ಮತ್ತು ವ್ಯಾಖ್ಯೆಗಳನ್ನು ಪರೀಕ್ಷೆಗಾಗಿ ನೀಡುವುದು
(ಬಿ) ಪ್ರಸ್ತುತವಿರುವ ಚಿಂತನೆಗಳು ಮತ್ತು ಅಭ್ಯಾಸಗಳ ಬಗ್ಗೆ ಪ್ರಶ್ನಿಸುವ ಅವಕಾಶವನ್ನು ಮಕ್ಕಳಿಗೆ ಕಲ್ಪಿಸುವುದು
(ಸಿ) ಸಮಾಜದ ಜವಾಬ್ದಾರಿಯುತ ವ್ಯಕ್ತಿಯಾಗಿ ಬೆಳೆಯುವ ಸದಾವಕಾಶವನ್ನು ಮಕ್ಕಳಿಗೆ ಒದಗಿಸಿಕೊಡುವುದು
(ಡಿ) ವಿವಿಧ ಸಾಂಸ್ಕೃತಿಕ ಆಚರಣೆಗಳನ್ನು ಗೌರವಿಸುವ ಮನೋಭಾವ ಮಕ್ಕಳಲ್ಲಿ ರೂಪಿಸುವುದು

18. ಇದು ಪರಿಸರ ವಿಜ್ಞಾನದ ಬೋಧನಾ ವಿಜ್ಞಾನವಲ್ಲ.
(ಎ) ಉಪನ್ಯಾಸ (ಬಿ) ಚರ್ಚೆ
(ಸಿ) ಕಾರ್ಯ ಯೋಜನೆ (ಡಿ) ಪುನರಾವರ್ತನೆ

19. ಕೆಳಗಿನವುಗಳನ್ನು ಹೊಂದಿಸಿ ಮತ್ತು ಸರಿಯುತ್ತರವನ್ನು ಆಯ್ಕೆ ಮಾಡಿ.

| ಪಟ್ಟಿ ಎ | ಪಟ್ಟಿ ಬಿ |
|---|---|
| (ಎ) ಸಾಮಾಜಿಕ ಮೌಲ್ಯ | (1) ಒತ್ತಡ ನಿರ್ವಹಣೆ |
| (ಬಿ) ಮನೋವೈಜ್ಞಾನಿಕ | (2) ಸಹಕಾರದ ಪ್ರಜ್ಞಾವಂತಿಕೆ |
| (ಸಿ) ನಾಗರೀಕ ಮೌಲ್ಯ | (3) ನೆರೆಹೊರೆಯವರೊಂದಿಗೆ ಹೊಂದಾಣಿಕೆ |
| (ಡಿ) ಸಾಂಸ್ಕೃತಿಕ ಮೌಲ್ಯ | (4) ಪರಂಪರೆ ಮತ್ತು ಸಂಪ್ರದಾಯ |

| | ಎ | ಬಿ | ಸಿ | ಡಿ |
|---|---|---|---|---|
| ಎ | 1 | 3 | 2 | 4 |
| ಬಿ | 2 | 4 | 3 | 1 |
| ಸಿ | 3 | 1 | 2 | 4 |
| ಡಿ | 3 | 2 | 4 | 1 |

20. ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಶಾಲೆಗಳಲ್ಲಿ ಜಾರಿಗೊಳಿಸಬೇಕು ಏಕೆಂದರೆ,
(ಎ) ಕಲಿಕೆದಾರನ ಎಲ್ಲಾ ಆಯಾಮಗಳು ಮತ್ತು ಸಾಮರ್ಥ್ಯಗಳನ್ನು ಮೌಲ್ಯೀಕರಿಸಿ ವಿಸ್ತೃತಗೊಳಿಸುತ್ತದೆ.
(ಬಿ) ಕಲಿಕೆದಾರನನ್ನು ಅನೌಪಚಾರಿಕವಾಗಿ ಪರೀಕ್ಷಿಸುವ ಅವಕಾಶವನ್ನು ಶಿಕ್ಷಕರಿಗೆ ಒದಗಿಸಿದೆ.
(ಸಿ) ಶಿಕ್ಷಕರು ಮಕ್ಕಳಿಗೆ ಹೆಚ್ಚು ಅಂಕಗಳನ್ನು ನೀಡುವ ಅವಕಾಶವನ್ನು ಕಲ್ಪಿಸಿದೆ.
(ಡಿ) ಕಲಿಕೆದಾರನನ್ನು ಕಷ್ಟಪಟ್ಟು ಅಧ್ಯಯನ ಮಾಡುವುದರಿಂದ ಮುಕ್ತಗೊಳಿಸುತ್ತದೆ.

21. " ಓಜೋನ್ ದಿನ"ವನ್ನು ಆಚರಿಸುವ ದಿನ
(ಎ) ಜೂನ್ 5 (ಬಿ) ನವೆಂಬರ್ 19
(ಸಿ) ಸೆಪ್ಟೆಂಬರ್ 16 (ಡಿ) ಡಿಸೆಂಬರ್ 31

22. ಅವಸಾನದ ಅಂಚಿನಲ್ಲಿರುವ ಸಸ್ಯ ಮತ್ತು ಪ್ರಾಣಿ ಸಂಕುಲಗಳ ಪರಸ್ಥಾನ ಸಂರಕ್ಷಣೆಯು ಇದರ ಮೂಲಕ ಸಾಧ್ಯ
(ಎ) ರಾಷ್ಟ್ರೀಯ ಉದ್ಯಾನವನಗಳು (ಬಿ) ಜರ್ಮ್‌ಪ್ಲಾಸ್ಮಾ ಬ್ಯಾಂಕ್‌ಗಳು
(ಸಿ) ವನ್ಯಜೀವಿ ಧಾಮಗಳು (ಡಿ) ಜೈವಿಕ ಸಂರಕ್ಷಣಾ ವಲಯ

23. ಅರಣ್ಯವು "ಜನರಿಂದ" ಜನರಿಗಾಗಿ ಎಂಬುದು ಸಂಬಂಧಿಸಿರುವುದು
(ಎ) ರೇಷ್ಮೆ ಕೃಷಿ (ಬಿ) ಸಾಮಾಜಿಕ ಅರಣ್ಯ
(ಸಿ) ಕೃಷಿ ಅರಣ್ಯ (ಡಿ) ಅರಣ್ಯ ಬೆಳೆಸುವಿಕೆ

24. ಜೈವಿಕ ಅಡಚಣೆ ಮತ್ತು ಮಾನವ ಮಧ್ಯೆ ಪ್ರವೇಶಿಕೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಿರುವುದು
(ಎ) ಮೌನ ಕಣಿವೆಯಲ್ಲಿ
(ಬಿ) ಕನ್ಹಾ ರಾಷ್ಟ್ರೀಯ ಉದ್ಯಾನವನದಲ್ಲಿ
(ಸಿ) ಭರತ್‌ಪುರ ವನ್ಯಧಾಮದಲ್ಲಿ
(ಡಿ) ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನದಲ್ಲಿ

25. "ಸಹಜ ಸನ್ನಿವೇಶದಲ್ಲಿ ನಡೆಯುವ ಮನಃಪೂರ್ವಕವಾದ ಉದ್ದೇಶಪೂರಿತ ಚಟುವಟಿಕೆಯೇ ಯೋಜನೆ ಹೀಗೆಂದು ವ್ಯಾಖ್ಯಾನಿಸಿದವರು
(ಎ) ಡಾ॥ ಜಿ.ಎ ಸ್ಟೀವನ್ಸನ್ (ಬಿ) ಬಲ್ಲಾರ್ಡ್
(ಸಿ) ಡಾ॥ ವಿಲಿಯಂ ಹೆಚ್ ಕಿಲ್‌ಪಾಟ್ರಿಕ್ (ಡಿ) ಡೆವೇ

26. ವಿಜ್ಞಾನ ವಿಷಯದ ಪ್ರಶ್ನೆ ಪತ್ರಿಕೆಯ ನೀಲಿ ನಕ್ಷೆಯು
(ಎ) ಬಹು ಆಯಾಮದ ತಃಖ್ತೆ
(ಬಿ) ದ್ವಿ ಆಯಾಮದ ತಃಖ್ತೆ
(ಸಿ) ತ್ರಿ ಆಯಾಮದ ತಃಖ್ತೆ
(ಡಿ) ಏಕ ಆಯಾಮದ ತಃಖ್ತೆ

27. ಸಂಕಲನ ಮೌಲ್ಯಮಾಪನಕ್ಕೆ ಇದು ಉದಾಹರಣೆಯಾಗಿದೆ.
(ಎ) ನೈದಾನಿಕ ಪರೀಕ್ಷೆಗಳ ನಿರ್ವಹಣೆ
(ಬಿ) ಬೋಧನಾ ಪ್ರಕ್ರಿಯೆಯಲ್ಲಿ ಪ್ರಶ್ನಿಸುವುದು
(ಸಿ) ಘಟಕ ಪರೀಕ್ಷೆಗಳನ್ನು ನಡೆಸುವುದು
(ಡಿ) ವಾರ್ಷಿಕ ಪರೀಕ್ಷೆಗಳ ನಿರ್ವಹಣೆ

28. ಜ್ಞಾನವಲಯಕ್ಕೆ ಸಂಬಂಧಿಸಿದ ನಿರ್ದಿಷ್ಟವು
(ಎ) ಅನುಕರಣೆ (ಬಿ) ಸ್ವೀಕರಿಸುವಿಕೆ
(ಸಿ) ಸ್ವಾಭಾವಿಕತೆ (ಡಿ) ವಿಶ್ಲೇಷಣೆ

29. ಮೆದು ಮೂಳೆ ರೋಗವು ಮುಖ್ಯವಾಗಿ ಇದರ ಕೊರತೆಯಿಂದ ಉಂಟಾಗುತ್ತದೆ.
(ಎ) ವಿಟಮಿನ್ – ಎ (ಬಿ) ವಿಟಮಿನ್ – ಡಿ
(ಸಿ) ವಿಟಮಿನ್ – ಬಿ (ಡಿ) ವಿಟಮಿನ್ – ಸಿ

30. ಮೃದ್ವಂಗಿಗೆ ಉದಾಹರಣೆ
(ಎ) ಚೇಳು (ಬಿ) ಜಿಗಣೆ
(ಸಿ) ಬಸವನ ಹುಳು (ಡಿ) ನಕ್ಷತ್ರ ಮೀನು

**ಕೀ – ಉತ್ತರಗಳು**

| | | | | | |
|---|---|---|---|---|---|
| 1 | ಬಿ | 11 | ಎ | 21 | ಸಿ |
| 2 | ಡಿ | 12 | ಸಿ | 22 | ಬಿ |
| 3 | ಬಿ | 13 | ಸಿ | 23 | ಬಿ |
| 4 | ಬಿ | 14 | ಎ | 24 | ಎ |
| 5 | ಸಿ | 15 | ಬಿ | 25 | ಸಿ |
| 6 | ಡಿ | 16 | ಬಿ | 26 | ಸಿ |
| 7 | ಬಿ | 17 | ಎ | 27 | ಡಿ |
| 8 | ಎ | 18 | ಡಿ | 28 | ಡಿ |
| 9 | ಬಿ | 19 | ಸಿ | 29 | ಬಿ |
| 10 | ಸಿ | 20 | ಎ | 30 | ಸಿ |


Teachingninja.in

**TET - 2014 Paper - I Environmental Science 1-5th Standard**

1. ಶೀತಲ ಸಮರದ ಸಂದರ್ಭದಲ್ಲಿ ಭಾರತವು ಯಾವ ಬಣವನ್ನು ಸೇರಲಿಲ್ಲ. ಕಾರಣ
(ಎ) ದುರ್ಬಲವಾದ ಸೇನೆ ಮತ್ತು ಶಸ್ತ್ರಾಸ್ತ್ರಗಳ ಕೊರತೆ
(ಬಿ) ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಹಾಯದ ನಿರೀಕ್ಷೆ
(ಸಿ) ಆರ್ಥಿಕವಾಗಿ ಸಾಕಷ್ಟು ಹಿಂದುಳಿದಿರುವಿಕೆ
(ಡಿ) ದೇಶದ ವಿದೇಶಾಂಗ ನೀತಿ

2. ಆಟಗಾರನೊಬ್ಬನಿಗೆ ಇರಬೇಕಾದ ಪ್ರಮುಖ ಲಕ್ಷಣಗಳಲ್ಲಿ ಇದು ಒಂದು
(ಎ) ಸಮಯ ಪ್ರಜ್ಞೆ (ಬಿ) ಆತ್ಮ ವಿಶ್ವಾಸ
(ಸಿ) ಏಕಾಗ್ರತೆ (ಡಿ) ಕ್ರೀಡಾ ಮನೋಭಾವ

3. ಜಲಚರಗಳ ಉಸಿರಾಟಕ್ಕೆ ಆಮ್ಲಜನಕ ಪೂರೈಸುವುದು
(ಎ) ಭೂಮಿಯ ವಾತಾವರಣ ಒದಗಿಸುತ್ತದೆ
(ಬಿ) ಜಲಚರ ಪ್ರಾಣಿಗಳೇ ತಯಾರಿಸಿಕೊಳ್ಳುತ್ತವೆ
(ಸಿ) ಜಲವಾಸಿ ಸಸ್ಯಗಳು ಒದಗಿಸುತ್ತವೆ
(ಡಿ) ಭೂವಾಸಿ ಸಸ್ಯಗಳು ನೀಡುತ್ತವೆ

4. 'ಟೆರಿಡೋಫೈಟಾ' ವರ್ಗಕ್ಕೆ ಇದು ಉತ್ತಮ ಉದಾಹರಣೆ
(ಎ) ದ್ವೈ ವಾರ್ಷಿಕ ಸಸ್ಯಗಳು (ಬಿ) ಬಹುವಾರ್ಷಿಕ ಸಸ್ಯಗಳು
(ಸಿ) ಅಲಂಕಾರಿಕ ಸಸ್ಯಗಳು (ಡಿ) ಜಲವಾಸಿ ಸಸ್ಯಗಳು

5. ಲಿಪಿಡ್‌ಗಳ ಇರುವಿಕೆಯನ್ನು ಪತ್ತೆ ಹಚ್ಚುವಿಕೆಗಾಗಿ ಬಳಸಲ್ಪಡುವ ರಾಸಾಯನಿಕ
(ಎ) ಬೆನೆಡಿಕ್ಟ ದ್ರಾವಣ (ಬಿ) ಅಯೋಡಿನ್
(ಸಿ) ಕಾಪರ್ ಸಲ್ಫೇಟ್ (ಡಿ) ಇಥೈಲ್ ಆಲ್ಕೋಹಾಲ್

6. ಮಣ್ಣು ಪರಿಸರದ ಘಟಕಗಳಲ್ಲಿ ಒಂದು ಇದು ಹೆಚ್ಚಾಗಿ ಆವಾಸವಾಗಿರುವುದು
(ಎ) ಖನಿಜ ಸಂಪನ್ಮೂಲಗಳಿಗೆ (ಬಿ) ಜೀವಿಗಳಿಗೆ
(ಸಿ) ಮರಗಿಡಗಳಿಗೆ (ಡಿ) ಜಲಸಂಪನ್ಮೂಲಗಳಿಗೆ

7. ಮಾರ್ಚ್ 22 ಈ ದಿನಾಚರಣೆ
(ಎ) ವಿಶ್ವ ಆರೋಗ್ಯ ದಿನ
(ಬಿ) ವಿಶ್ವ ತಂಬಾಕುರಹಿತ ದಿನ
(ಸಿ) ವಿಶ್ವ ಜಲ ದಿನ
(ಡಿ) ವಿಶ್ವ ರಕ್ಷಣಾ ದಿನ

8. ಕ್ಯಾಲ್ಸಿಯಂ ಸಿಲಿಕೇಟ್+ಕ್ಯಾಲ್ಸಿಯಂ ಅಲ್ಯೂಮಿನೇಟ್ =
(ಎ) ಸಿರಾಮಿಕ್ (ಬಿ) ಗ್ಲಾಸ್ (ಸಿ) ಸಿಮೆಂಟ್ (ಡಿ) ಪ್ಲಾಸ್ಟಿಕ್

9. ಸೌರಮಂಡಲದಿಂದ ಭೂಮಿಗೆ ಮುಕ್ತವಾಗಿ ಬೀಳುತ್ತಿರುವ ಕಾಯದ ವೇಗ ಹೆಚ್ಚಾಗುತ್ತದೆ ಕಾರಣ
(ಎ) ಚಲನಶಕ್ತಿಯನ್ನು ಕಳೆದುಕೊಳ್ಳುತ್ತದೆ
(ಬಿ) ಅಧಿಕ ಚಲನಶಕ್ತಿಯನ್ನು ಗಳಿಸಿಕೊಳ್ಳುತ್ತದೆ
(ಸಿ) ದ್ರವ್ಯರಾಶಿ ಹೆಚ್ಚಿಸಿಕೊಳ್ಳುತ್ತದೆ
(ಡಿ) ಹೆಚ್ಚು ಹಗುರವಾಗುತ್ತದೆ

10. ಸಾವಯವ ಗೊಬ್ಬರ ಬಳಸಿ ಉತ್ಪಾದಿಸಿದ ಆಹಾರ ಪದಾರ್ಥಗಳನ್ನು ಬಳಸುವುದರಿಂದ
(ಎ) ತ್ಯಾಜ್ಯಗಳ ಮರುಬಳಕೆ (ಬಿ) ಪರಿಸರ ಮಾಲಿನ್ಯಕ್ಕೆ ತಡೆ
(ಸಿ) ಆರೋಗ್ಯದಲ್ಲಿ ಉತ್ತಮತೆ (ಡಿ) ಆರ್ಥಿಕ ಸ್ಥಿತಿ ಸುಧಾರಣೆ

11. ORS ದ್ರಾವಣ
(ಎ) ಕಾಯಿಸಿ ಆರಿಸಿದ 1 ಲೋಟ ನೀರು + 1 ಚಮಚ ಸಕ್ಕರೆ + 1/4 ಚಮಚ ಉಪ್ಪು + 4 ಹನಿ ನಿಂಬೆರಸ
(ಬಿ) 1 ಲೋಟ ನೀರು + 1 ಚಮಚ ಸಕ್ಕರೆ + 1/4 ಚಮಚ ಉಪ್ಪು + 4 ಹನಿ ನಿಂಬೆ ರಸ
(ಸಿ) ಕಾಯಿಸಿ ಆರಿಸಿದ 1 ಲೋಟ ನೀರು + 1 ಚಮಚ ಸಕ್ಕರೆ + 1 ಚಮಚ ಉಪ್ಪು + 1 ಚಮಚ ನಿಂಬೆರಸ
(ಡಿ) 1 ಲೋಟ ನೀರು + 1 ಚಮಚ ಸಕ್ಕರೆ + 1/4 ಚಮಚ ಉಪ್ಪು + 1 ಚಮಚ ನಿಂಬೆರಸ

12. ಹುಲಿ, ಕಪ್ಪೆ, ಬಾತುಕೋಳಿ, ಹಾವು ಈ 4 ಜೀವಿಗಳನ್ನು ಮರಳುಗಾಡಿನಲ್ಲಿ ಬಿಡಲಾಗಿದೆ. ಕೂಡಲೇ ವಾತಾವರಣಕ್ಕೆ ಹೊಂದಿಕೊಳ್ಳುವ ಜೀವಿ.
(ಎ) ಹಾವು (ಬಿ) ಹುಲಿ
(ಸಿ) ಬೆಕ್ಕು (ಡಿ) ಪಾರಿವಾಳ

13. ಮೇಲ್ಮಟ್ಟದ ಜೀವಿಗಳಲ್ಲಿ ಜಠರದಲ್ಲಿನ ಪಚನಕ್ರಿಯೆಗೆ ಸಹಾಯಕವಾಗಿರುವ ಕಿಣ್ವ
(ಎ) ರೆನಿನ್ (ಬಿ) ಲಿಪೇಸ್
(ಸಿ) ಸುಕ್ರೇನ್ (ಡಿ) ಮಾಲ್ಟೋಸ್

14. ಸಹರಾದ ಬಿಡೋಯಿನ್ ಸಮುದಾಯದವರು ವೃತ್ತಿಯ ಆಧಾರಿತವಾಗಿ ಹೀಗೆ ಗುರ್ತಿಸಲ್ಪಟ್ಟಿದ್ದಾರೆ
(ಎ) ಪಶುಪಾಲಕ ಅಲೆಮಾರಿಗಳು
(ಬಿ) ಬೇಟೆಗಾರಿಕ ಅಲೆಮಾರಿಗಳು
(ಸಿ) ಕೃಷಿ ವಲಸೆಗಾರರು
(ಡಿ) ಋತುಕಾಲಿಕ ವಲಸೆಗಾರರು

15. ಎದೆಯೇರಿಸಿದ ಬಿಲ್ಲು ಪ್ರಚ್ಛನ್ನ ಶಕ್ತಿಯನ್ನು ಹೊಂದಿರುವ ಕಾರಣ
(ಎ) ಸಾಪೇಕ್ಷ ಸ್ಥಾನ ಬಲ (ಬಿ) ಸಾಪೇಕ್ಷ ಗುರುತ್ವಾಕರ್ಷಣ ಬಲ
(ಸಿ) ಸಾಪೇಕ್ಷಾಕರ್ಷಣ ಬಲ (ಡಿ) ಸಾಪೇಕ್ಷವಿಕರ್ಷಣ ಬಲ

16. ಪೌಷ್ಟಿಕತೆ ಕುರಿತಂತೆ ತರಗತಿಯನ್ನು ಪರಿಣಾಮಕಾರಿಗೊಳಿಸಲು ತೆಗೆದುಕೊಳ್ಳಬಹುದಾದ ಕಾರ್ಯ
(ಎ) ಚಾರ್ಟ್ ಪ್ರದರ್ಶಿಸಿ ವಿದ್ಯಾರ್ಥಿಗಳೊಡನೆ ಚರ್ಚಿಸುವುದು
(ಬಿ) ನ್ಯೂನ ಪೋಷಣೆಗೆ ಒಳಗಾದ ವಿದ್ಯಾರ್ಥಿಯನ್ನು ಕರೆದು ದೇಹವನ್ನು ಪ್ರದರ್ಶಿಸುವುದು
(ಸಿ) ಸಂಗ್ರಹಿಸಿದ ಆಹಾರ ಪದಾರ್ಥಗಳನ್ನು ಕುರಿತು ವಿವರಣೆ ನೀಡುವುದು
(ಡಿ) ಪೌಷ್ಟಿಕಯುತ ಆಹಾರಪದಾರ್ಥಗಳನ್ನು ಕುರಿತು ವಿವರಣೆ ನೀಡುವುದು

17. ಪರಿಸರ ಅಧ್ಯಯನ ಕಲಿಕೆಯಲ್ಲಿ ನಿರಂತರ–ವ್ಯಾಪಕ ಮೌಲ್ಯಮಾಪನಕ್ಕೆ ಇದು ಉತ್ತಮ ಉದಾಹರಣೆಯಾಗಿದೆ.
(ಎ) ಪಠ್ಯ ಸಹಿತ ಅಭ್ಯಾಸಗಳನ್ನು ಪೂರ್ಣಗೊಳಿಸುವುದು
(ಬಿ) ಮಾಹಿತಿ ಸಂಗ್ರಹಿಸಿ ದಾಖಲಿಸುವುದು
(ಸಿ) ಯೋಜನೆಗಳನ್ನು ಕೈಗೊಂಡು ಮಂಡಿಸುವುದು
(ಡಿ) ಸಮಸ್ಯೆಗಳನ್ನು ಬಿಡಿಸಿ ಸುಲಭೀಕರಿಸುವುದು


Teachingninja.in

18. ಕಿರಿಯ ಪ್ರಾಥಾಮಿಕ ತರಗತಿಗಳಲ್ಲಿ ಪರಿಸರ ಅಧ್ಯಯನ ಕಲಿಕೆಯನ್ನು ಅನುಕೂಲಿಸುವವರಿಗೆ ಇದು ಅವಶ್ಯಕ
(ಎ) ಪರಿಸರ ಅಧ್ಯಯನ ಅಭ್ಯಾಸ ಪುಸ್ತಕಗಳ ವಿನ್ಯಾಸ
(ಬಿ) ಪರಿಸರ ಸಂಬಂಧಿತ ಸಮಸ್ಯೆಗಳ ಅರಿವು
(ಸಿ) ಪರಿಸರ ಕಲಿಕೆಯ ವಿಧಾನ ಮತ್ತು ತಂತ್ರಗಳು
(ಡಿ) ಪರಿಸರ ಕಲಿಕೆಯ ಪಠ್ಯಕ್ರಮ ರೂಪುರೇಷೆ

19. ವಿದ್ಯಾರ್ಥಿಯು ತನ್ನ ಈ ಪರಿಸರವನ್ನು ಸ್ವಚ್ಛವಾಗಿರಿಸಿಕೊಳ್ಳಲು ಪ್ರಾಥಾಮಿಕ ತರಗತಿಗಳಲ್ಲಿ ಪರಿಸರ ಶಿಕ್ಷಣದ ಅವಶ್ಯಕತೆಯಿದೆ.
(ಎ) ಶಾಲೆ (ಬಿ) ಸುತ್ತಲಿನ ಪರಿಸರ
(ಸಿ) ಮನೆ (ಡಿ) ಸಮಾಜ

20. ಪರಿಸರ ಅಧ್ಯಯನದ ಕಲಿಕೆಯನ್ನು ಶಿಶುಸ್ನೇಹಿಯಾಗಿಸುವ ಚಟುವಟಿಕೆಯ ತಂತ್ರ
(ಎ) ಶೈಕ್ಷಣಿಕ ಪ್ರವಾಸ (ಬಿ) ಸಂದರ್ಶನ
(ಸಿ) ಗುಂಪುಚರ್ಚೆ (ಡಿ) ಕ್ಷೇತ್ರಭೇಟಿ

21. ನಾಗರೀತೆಗಳಿಗೆ ಪೂರಕವಾದ ಪಠ್ಯಾಂಶಗಳನ್ನು ಚರ್ಚಿಸುವಾಗ ಮುಖ್ಯವಾದ ಅಂಶವೆಂದರೆ, ಅವುಗಳ
(ಎ) ವೈಶಿಷ್ಟ್ಯವನ್ನು ಅವಲೋಕಿಸುವುದು
(ಬಿ) ಉಗಮದ ಕಾರಣಗಳನ್ನು ಅರಿಯುವುದು
(ಸಿ) ಕೊಡುಗೆಗಳನ್ನು ಪ್ರಶಂಶಿಸುವುದು
(ಡಿ) ಪ್ರಸ್ತುತದೊಂದಿಗೆ ಹೋಲಿಸಿ ವ್ಯತ್ಯಾಸ ಕಂಡುಕೊಳ್ಳುವುದು

22 ವಿದ್ಯಾರ್ಥಿಗಳ ಜ್ಞಾನ ಸಂರಚನವಾದದ ಕಲಿಕಾತತ್ವದ ಅಡಿಯಲ್ಲಿ ಶಿಕ್ಷಕರ ಜವಾಬ್ದಾರಿಯ ಕಾರ್ಯವೆಂದರೆ,
(ಎ) ಕಲಿಕೆಯ ನಿಯಮಗಳನ್ನು ಪಾಲಿಸುವುದು
(ಬಿ) ಸ್ವತಂತ್ರ ಜ್ಞಾನ ಸಂಗ್ರಹಣೆಯ ಜೊತೆಯಾಗಿರುವುದು
(ಸಿ) ಸಮಂಜಸ ಕಲಿಕೋಪಕರಣಗಳನ್ನು ಬಳಸುವುದು
(ಡಿ) ಯೋಜಿತ ಗೃಹಪಾಠಗಳನ್ನು ಸಿದ್ಧಪಡಿಸುವುದು

23. ರಾಷ್ಟ್ರೀಯ ಹಬ್ಬಗಳ ಆಚರಣೆಯ ಪ್ರಮುಖ ಆಶಯ
(ಎ) ಮೌಲ್ಯಗಳ ಅಳವಡಿಕೆ
(ಬಿ) ಮನರಂಜನೆ
(ಸಿ) ಸಮುದಾಯದ ಪಾಲ್ಗೊಳ್ಳುವಿಕೆ
(ಡಿ) ಸಂಘಟನಾ ಕೌಶಲ

24. ಪರಿಸರ ಶಿಕ್ಷಣದ ಪ್ರಧಾನ ಕಾಳಜಿಯು
(ಎ) ಪ್ರತಿದಿನವನ್ನೂ ಪರಿಸರ ದಿನವನ್ನಾಗಿ ಆಚರಿಸುವುದೇ ಆಗಿದೆ.
(ಬಿ) ಪರಿಸರದ ಬಗ್ಗೆ ಜನ ಜಾಗೃತಿಗೊಳಿಸುವುದೇ ಆಗಿದೆ
(ಸಿ) ಸಂರಕ್ಷಣೆಯ ವಿಧಿ ವಿಧಾನಗಳನ್ನು ಅರ್ಥಮಾಡಿಕೊಳ್ಳುವುದೇ ಆಗಿದೆ.
(ಡಿ) ಸಮಸ್ಯೆಗಳ ಪರಿಹಾರೋಪಯಕ್ಕೆ ತಂತ್ರಗಳನ್ನು ಅಳವಡಿಸಿಕೊಳ್ಳುವುದೇ ಆಗಿದೆ.

25. 5ನೇ ತರಗತಿಯ 10 ವಿದ್ಯಾರ್ಥಿಗಳು ಭೂಪಟದಲ್ಲಿ ದಿಕ್ಕುಗಳನ್ನು ಗುರ್ತಿಸುವುದರಲ್ಲಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ, ಇಲ್ಲಿ ಸೂಕ್ತವಾದ ಪರಿಹಾರ ಕ್ರಮ
(ಎ) ಮರುಬೋಧನೆ (ಬಿ) ಪರಿಹಾರ ಬೋಧನೆ
(ಸಿ) ಪೂರಕ ಬೋಧನೆ (ಡಿ) ಕ್ರಿಯಾ ಸಂಶೋಧನೆ

26. ಪರಿಸರ ಅಧ್ಯಯನದ ಕಲಿಕೆಯ ಉದ್ದೇಶ
(ಎ) ಪರಿಕಲ್ಪನೆಗಳನ್ನು ಅರ್ಥೈಸುವುದು
(ಬಿ) ವಿಜ್ಞಾನ ಮತ್ತು ಸಮಾಜ ವಿಜ್ಞಾನವನ್ನು ಕಲಿಸುವುದು
(ಸಿ) ವೈಜ್ಞಾನಿಕ ಮತ್ತು ಸಾಮಾಜಿಕ ಪರಿಕಲ್ಪನೆಗಳನ್ನು ಏಕೀಕೃತಗೊಳಿಸುವುದು
(ಡಿ) ಸ್ವಾಭಾವಿಕ ಮತ್ತು ಸಾಮಾಜಿಕ ಪರಿಸರವನ್ನು ಅರ್ಥ ಮಾಡಿಕೊಳ್ಳುವುದು

27. ಪರಿಸರ ಅಧ್ಯಯನಕ್ಕೆ ಸಂಬಂಧಿಸಿದಂತೆ ಶಿಕ್ಷಕರಿಗೆ ಸಾಮರ್ಥ್ಯವರ್ಧನಾ ಕಾರ್ಯತಂತ್ರಗಳ ಅವಶ್ಯಕತೆಯಿದೆ ಏಕೆಂದರೆ,
(ಎ) ವೃತ್ತಿಪರ ವಿಕಸನಕ್ಕೆ ಸಹಕಾರಿಯಾಗಲು
(ಬಿ) ವೇತನ ತುಟ್ಟಿ ಭತ್ಯೆಯಲ್ಲಿ ಹೆಚ್ಚಳವಾಗಲು
(ಸಿ) ಪರಿಕಲ್ಪನಾತ್ಮಕ ಮತ್ತು ಬೋಧನಾತತ್ವಗಳಲ್ಲಿ ಸ್ಪಷ್ಟತೆ ಕಾಣಲು
(ಡಿ) ಸಿ.ಸಿ.ಇ.ಗೆ ಅನುಗುಣವಾಗಿ ಶಿಕ್ಷಕರು ಸಕ್ರಿಯಗೊಳ್ಳಲು

28. ಪೃಥ್ವಿಯ ಭೂ ಸ್ವರೂಪಗಳು ಈ ಸಾಮರ್ಥ್ಯ ಕಲಿಕೆಗೆ ಸಮಂಜಸವೆನಿಸುವ ಕಲಿಕೋಪಕರಣ
(ಎ) ಚಾರ್ಟ್
(ಬಿ) ವೀಡಿಯೋ ಕ್ಲಿಪ್ಪಿಂಗ್
(ಸಿ) ಡೋಮಿನೋ ಕಾರ್ಡ್ಸ್
(ಡಿ) ಫ್ಲ್ಯಾಶ್ ಕಾರ್ಡ್ಸ್

29. ಕಿರಿಯ ಪ್ರಾಥಾಮಿಕ ತರಗತಿಗಳಲ್ಲಿ ಬೋಧನೆಯ ಪ್ರಮುಖ ವಸ್ತು
(ಎ) ಕಲಿಕೋಪಕರಣ
(ಬಿ) ಸಾಮರ್ಥ್ಯ
(ಸಿ) ಪಠ್ಯಪುಸ್ತಕ
(ಡಿ) ಚಟುವಟಿಕೆ

30. ಮೇಧಾ ಪಾಟ್ಕರ್‌ರವರ ಮುಂಚೂಣಿ ವಹಿಸಿದ ಹೋರಾಟವಿದು
(ಎ) ಚಂಪಾರಣ್ಯ
(ಬಿ) ಚಿಪ್ಕೋ
(ಸಿ) ಅಪ್ಪಿಕೊ
(ಡಿ) ನರ್ಮದಾ ಬಚಾವ್

**ಕೀ – ಉತ್ತರಗಳು**

| | | | | | |
|---|---|---|---|---|---|
| 1 | ಡಿ | 11 | ಎ | 21 | ಡಿ |
| 2 | ಡಿ | 12 | ಎ | 22 | ಬಿ |
| 3 | ಸಿ | 13 | ಎ | 23 | ಎ |
| 4 | ಸಿ | 14 | ಎ | 24 | ಡಿ |
| 5 | ಡಿ | 15 | ಎ | 25 | ಡಿ |
| 6 | ಬಿ | 16 | ಸಿ | 26 | ಸಿ |
| 7 | ಸಿ | 17 | ಸಿ | 27 | ಸಿ |
| 8 | ಸಿ | 18 | ಸಿ | 28 | ಬಿ |
| 9 | ಬಿ | 19 | ಬಿ | 29 | ಬಿ |
| 10 | ಸಿ | 20 | ಡಿ | 30 | ಡಿ |

Teachingninja.in